

# ಕನ್ನಡ ಲೋಕ

**ಕನ್ನಡ ಭಾಷಾ ಪಠ್ಯ**
**(ಸಿ.ಬಿ.ಸಿ.ಎಸ್. ಸ್ಕೀಂ)**




**ಪ್ರಧಾನ ಸಂಪಾದಕರು**
ಡಾ. ಜಿ.ಎಂ. ನಾಗಯ್ಯ

**ಸಂಪಾದಕರು**
ದಾದಾಪೀರ್ ನವಿಲೇಹಾಳ್
ಡಾ. ಆರ್. ಮಹೇಶ್


ದಾವಣಗೆರೆ ವಿಶ್ವವಿದ್ಯಾಲಯದ ಬಿ.ಎ., ಬಿ.ಎಸ್ಸಿ, ಬಿ.ಎಸ್ಸಿ (ಹೋಂ ಸೈನ್ಸ್)., ಬಿ.ಸಿ.ಎ., ಬಿ.ಎಸ್.ಡಬ್ಲ್ಯೂ., ಬಿ.ಎಫ್.ಡಿ., ಬಿ.ಎಸ್.ಎ. ಪದವಿಗಳ ಎರಡನೆಯ ಸೆಮಿಸ್ಟರ್
೨೦೧೬-೧೭; ೨೦೧೭-೧೮; ೨೦೧೮-೧೯



# ಕನ್ನಡ ಲೋಕ

## ಕನ್ನಡ ಭಾಷಾ ಪಠ್ಯ
## (ಸಿ.ಬಿ.ಸಿ.ಎಸ್. ಸ್ಕೀಂ)

**ದಾವಣಗೆರೆ ವಿಶ್ವವಿದ್ಯಾಲಯದ**
**ಬಿ.ಎ., ಬಿ.ಎಸ್ಸಿ, ಬಿ.ಎಸ್ಸಿ (ಹೋಂ ಸೈನ್ಸ್)., ಬಿ.ಸಿ.ಎ., ಬಿ.ಎಸ್.ಡಬ್ಲ್ಯೂ.,**
**ಬಿ.ಎಫ್.ಡಿ., ಬಿ.ಎಸ್.ಎ. ಪದವಿಗಳ**
**ಎರಡನೆಯ ಸೆಮಿಸ್ಟರ್**
೨೦೧೬-೧೭; ೨೦೧೭-೧೮; ೨೦೧೮-೧೯


**ಪ್ರಧಾನ ಸಂಪಾದಕರು**
**ಡಾ. ಜೆ.ಎಂ. ನಾಗಯ್ಯ**

**ಸಂಪಾದಕರು**
**ದಾದಾಪೀರ್ ನವಿಲೇಹಾಳ್**
**ಡಾ. ಆರ್. ಮಹೇಶ್**

ಇಲ್ಲಿನ ಬರಹಗಳ ಲೇಖಕರನ್ನು / ಹಕ್ಕುದಾರರನ್ನು ಸಂಪರ್ಕಿಸಿ ಅವರ ಒಪ್ಪಿಗೆಯನ್ನು ಪಡೆದುಕೊಳ್ಳಲು ಪ್ರಕಾಶನ ಸಂಸ್ಥೆಯು ಪ್ರಯತ್ನಿಸುತ್ತಿದೆ. ಆದ್ದರಿಂದ ಸಂಬಂಧಿಸಿದ ವಿವರಗಳನ್ನು ದಯವಿಟ್ಟು ಯಾರಾದರೂ ತಿಳಿಸಿದಲ್ಲಿ ಸರಿಯಾದ ಸ್ವೀಕೃತಿಗಳನ್ನು ಮುಂದಿನ ಆವೃತ್ತಿಗಳಲ್ಲಿ ನಮೂದಿಸಲಾಗುವುದು.


| | |
|---|---|
| Kannada Loka | Kannada Text book for IInd Semester **B.A., B.Sc., B.Sc. (Home Science), B.C.A, B.S.W., B.F.D., B.S.A.** |
| Chief Editor | Dr. J.M. Nagaiah |
| Editors | Dadapeer Navilehal<br>Dr. R. Mahesh |
| Published by | Orient Blackswan Private Limited |
| | For Davangere University,<br>Davangere |

# ದಾವಣಗೆರೆ ವಿಶ್ವವಿದ್ಯಾಲಯ


## ಕನ್ನಡ ಅಧ್ಯಯನ ಮಂಡಳಿ

| | | |
|---|---|---|
| ಡಾ. ಜಿ.ಎಂ. ನಾಗಯ್ಯ | : | ಅಧ್ಯಕ್ಷರು |
| ಡಾ. ನಟರಾಜ ಹುಳಿಯಾರ್ | : | ಸದಸ್ಯರು |
| ಡಾ. ಅಮರೇಶ ನುಗಡೋಣಿ | : | ಸದಸ್ಯರು |
| ಗಾಯತ್ರಿದೇವಿ ಎಸ್.ವಿ. | : | ಸದಸ್ಯರು |
| ಕರಿಸಿದ್ದೇಶ್ವರ ಸ್ವಾಮಿ ಎಂ.ಎಸ್. | : | ಸದಸ್ಯರು |

## ಸಂಪಾದಕ ಮಂಡಳಿ

| | | |
|---|---|---|
| ಡಾ. ಜಿ.ಎಂ. ನಾಗಯ್ಯ | : | ಪ್ರಧಾನ ಸಂಪಾದಕರು |
| ದಾದಾಪೀರ್ ನವಿಲೇಹಾಳ್ | : | ಸಂಪಾದಕರು |
| ಡಾ. ಆರ್. ಮಹೇಶ್ | : | ಸಂಪಾದಕರು |

# ಕುಲಪತಿಗಳ ಮಾತು

ದಾವಣಗೆರೆ ವಿಶ್ವವಿದ್ಯಾಲಯ ಪದವಿ ತರಗತಿಗಳಿಗೆ ಸೂಕ್ತವಾದ ಕನ್ನಡ ಭಾಷಾ ಪಠ್ಯಗಳನ್ನು ೨೦೧೬-೧೭ನೇ ಸಾಲಿನ ದ್ವಿತೀಯ ಸೆಮಿಸ್ಟರ್ ತರಗತಿಗಳಿಗೆ ಸಿದ್ಧಪಡಿಸಿ ಹೊರತರುತ್ತಿರುವುದು ಸಂತೋಷದ ವಿಷಯವಾಗಿದೆ.

ಆಧುನೀಕರಣ, ಜಾಗತೀಕರಣ ಮತ್ತು ಸಂಸ್ಕೃತೀಕರಣದ ಪ್ರಭಾವ ತೀವ್ರಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಭಾಷಾ ಪಠ್ಯಗಳು ಹೆಚ್ಚು ಪ್ರಸ್ತುತಗೊಳ್ಳಬೇಕು ಎಂಬ ಆಶಯದಿಂದ ಕನ್ನಡ ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ. ಜೆ.ಎಂ. ನಾಗಯ್ಯ ಅವರು ಸಮರ್ಥ ಮಾರ್ಗದರ್ಶನ ನೀಡಿರುವುದು ಔಚಿತ್ಯ ಪೂರ್ಣವಾಗಿದೆ. ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯ ಹಾಗೂ ಅಭಿವ್ಯಕ್ತಿ ಕೌಶಲಗಳನ್ನು ಗಮನದಲ್ಲಿರಿಸಿಕೊಂಡು ಸಿದ್ಧವಾಗಿರುವ 'ಕನ್ನಡ ಲೋಕ' ಪಠ್ಯವನ್ನು ಶ್ರದ್ಧೆ, ಶ್ರಮ ಹಾಗೂ ಆಸಕ್ತಿಯಿಂದ ಸಂಪಾದಕರಾದ ದಾದಾಪೀರ್ ನವಿಲೇಹಾಳ್ ಹಾಗೂ ಡಾ. ಆರ್. ಮಹೇಶ್ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಸಕಾಲದಲ್ಲಿ ಸುಂದರವಾಗಿ ಓರಿಯಂಟಲ್ ಬ್ಲಾಕ್‌ಸ್ವ್ಯಾನ್ ಪ್ರಕಾಶನದವರು ಮುದ್ರಿಸಿಕೊಟ್ಟಿದ್ದಾರೆ.

ಮಹತ್ವಾಕಾಂಕ್ಷೆಯ ಈ ಪಠ್ಯವನ್ನು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಂಡು ವ್ಯಕ್ತಿತ್ವ ವಿಕಾಸ ಮಾಡಿಕೊಂಡರೆ ಶ್ರಮ ಸಾರ್ಥಕವಾಗುತ್ತದೆ.

ದಿನಾಂಕ: ೦೧.೦೧.೨೦೧೭ **ಪ್ರೊ. ಬಿ.ಬಿ. ಕಲಿವಾಳ**

ಸ್ಥಳ: ಶಿವಗಂಗೋತ್ರಿ, ದಾವಣಗೆರೆ **ಕುಲಪತಿ**

# ಪ್ರಧಾನ ಸಂಪಾದಕರ ನುಡಿ

ಕನ್ನಡ ಭಾಷಾ ಬೋಧನೆಯ ಪಠ್ಯಕ್ರಮದ ಮಾದರಿಯು ಹೊಸ ಕಾಲದ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪುಗೊಳ್ಳುವ ಅನಿವಾರ್ಯತೆಯನ್ನು ಮನಗಂಡು ದಾವಣಗೆರೆ ವಿಶ್ವವಿದ್ಯಾಲಯದ ಈ ಹೊಸ ಪಠ್ಯಗಳು ರೂಪುಗೊಳ್ಳುತ್ತಿವೆ.

ಪ್ರಸ್ತುತ ಸನ್ನಿವೇಶದ ಅನೇಕ ಅಗತ್ಯಗಳನ್ನು ಪೂರೈಸುವ ಕೆಲಸವನ್ನು ಈ ಪಠ್ಯಗಳು ಮಾಡುತ್ತಿವೆ. ಭಾಷಾ ಬೋಧನೆಯ ಸಂದರ್ಭದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗೆಗಿನ ಆಸಕ್ತಿಯು ಅನೇಕ ನೆಲೆಗಳಲ್ಲಿ ನಡೆಯಬೇಕಾಗಿದೆ. ಕನ್ನಡವು ಜ್ಞಾನದ ಭಾಷೆಯೂ ಅನ್ನ ಮತ್ತು ಆಲೋಚನೆಯ ಭಾಷೆಯೂ ಆಗಿ ಅಭಿವ್ಯಕ್ತಗೊಳ್ಳುವ ಸಾಧನವಾಗಿ ರೂಪುಗೊಳ್ಳುವಲ್ಲಿ ವಿದ್ಯಾರ್ಥಿಗಳ ಸಂಕಲ್ಪ ಮುಖ್ಯವಾಗಿದೆ. ಕುತೂಹಲ ಹುಟ್ಟಿಸುವ ವರ್ತಮಾನ ಕಾಲದ ಅನೇಕ ಸಮಸ್ಯೆಗಳನ್ನು ಥೀಮ್‌ಗಳಾಗಿ ನೋಡುವ ಬಗೆಯೂ ಇದರಲ್ಲಿ ಒಂದು. ಭಾಷೆ ಮತ್ತು ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಗ್ರಹಿಸುವುದರಿಂದ ವಿದ್ಯಾರ್ಥಿಗಳು ಗ್ರಹಿಕೆ, ಅಭಿವ್ಯಕ್ತಿ ಹಾಗೂ ಜ್ಞಾನದ ದೃಷ್ಟಿಯಲ್ಲಿ ಹೆಚ್ಚು ಪ್ರಸ್ತುತವಾಗುತ್ತಾರೆ. ಕನ್ನಡವು ಅವರಿಗೆ ಹತ್ತಿರವಾಗುತ್ತದೆ. ಪಾರಂಪರಿಕ, ಸಾಹಿತ್ಯಿಕ ಸಾಮಗ್ರಿಗಳ ಪರಿಚಯವೂ ಅವರಿಗೆ ಬೇಕಾಗಿರುವುದರಿಂದ, ಅಭ್ಯಾಸದ ವಿಭಾಗದಲ್ಲಿ ವಿದ್ಯಾರ್ಥಿಗಳು ಅದನ್ನು ಮಾಡುತ್ತಾರೆ.

ಹೊಸ ಪಠ್ಯಕ್ರಮವು ವಿದ್ಯಾರ್ಥಿಗಳು ಮೂಲ ಪಠ್ಯಗಳನ್ನು ಓದಲೇಬೇಕಾದ ಅಗತ್ಯವನ್ನು ಸೃಷ್ಟಿಸುತ್ತದೆ ಮತ್ತು ಪರಸ್ಪರ ಭಿನ್ನಪಠ್ಯಗಳಲ್ಲಿ ವ್ಯಕ್ತವಾಗುವ ವಿಭಿನ್ನ ಆಲೋಚನೆಗಳನ್ನು ಗ್ರಹಿಸುವುದರ ಮೂಲಕ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾರೆ. ಇದರಿಂದ ಅವರಲ್ಲಿ ಸಕ್ರಿಯವಾದ ಕೌಶಲಗಳು ಬೆಳೆಯುತ್ತವೆ ಮತ್ತು ಚರ್ಚೆ, ವಿಶ್ಲೇಷಣೆ ಮುಂತಾದ ಕೌಶಲಗಳಲ್ಲಿ ವಿದ್ಯಾರ್ಥಿಗಳನ್ನು ಬೆಳೆಸಬೇಕಾಗಿರುವುದು ನಮ್ಮ ಮುಖ್ಯ ಕಾರ್ಯಗಳಲ್ಲಿ ಒಂದಾಗಿದೆ.

ವಿದ್ಯಾರ್ಥಿಗಳು ಹಾಗೂ ಬೋಧಕರಿಗೆ ಕಲಿಯುವ, ಕಲಿಸುವ ವಿನ್ಯಾಸದ ಬಗ್ಗೆ ಸಾಕಷ್ಟು ಸೂಚನೆಗಳು ಅಭ್ಯಾಸ ಪಠ್ಯಗಳಲ್ಲಿ ಸಿಗಲಿವೆ.

ಈ ಪಠ್ಯಗಳು ಹೊಸದಾಗಿ ರೂಪುಗೊಳ್ಳಬೇಕೆಂಬ ಉತ್ಸಾಹ ಮತ್ತು ಉಮೇದಿಗೆ ಕಾರಣರಾದವರು ಕುಲಪತಿಗಳಾದ ಮಾನ್ಯ ಪ್ರೊ. ಬಿ.ಬಿ. ಕಲಿವಾಳ ಅವರು ಮತ್ತು ವಿಶ್ವವಿದ್ಯಾಲಯದ ಉಳಿದ ಅಧಿಕಾರಿಗಳು ಅವರಿಗೆ ನನ್ನ ವಂದನೆಗಳು.

ಈ ಪಠ್ಯಗಳು ರೂಪುಗೊಳ್ಳಲು ಕಾರಣರಾದ ಅಧ್ಯಯನ ಮಂಡಳಿಯ ಸದಸ್ಯರಿಗೂ ಅಧ್ಯಾಪಕ ವೇದಿಕೆಯವರಿಗೂ, ಸಕಾಲದಲ್ಲಿ ಸಂಪಾದಿಸಿಕೊಟ್ಟ ದಾದಾಪೀರ್ ನವಿಲೇಹಾಳ್ ಹಾಗೂ ಡಾ. ಆರ್. ಮಹೇಶ್ ಇವರಿಗೂ ನನ್ನ ಅಭಿನಂದನೆಗಳು. ಸುಂದರವಾಗಿ ಮುದ್ರಿಸಿ ಪ್ರಕಾಶನದ ವ್ಯವಸ್ಥೆಗೆ ಕಾರಣರಾದ ಓರಿಯೆಂಟಲ್ ಬ್ಲಾಕ್‌ಸ್ವ್ಯಾನ್ ಪ್ರೈ. ಲಿ. ಸಂಸ್ಥೆಗೂ ನಾನು ಆಭಾರಿ.

**ಡಾ. ಜೆ.ಎಂ. ನಾಗಯ್ಯ**

**ಪ್ರಧಾನ ಸಂಪಾದಕರು**

# ಥೀಮ್ ಕುರಿತು ಸಂಪಾದಕರ ಮಾತು

ಭೂಮಿ, ಜೀವ ಮತ್ತು ಆಕಾಶ ಎಂಬ ಮೂರು ಥೀಮ್‌ಗಳನ್ನು ಕೇಂದ್ರವಾಗಿಟ್ಟುಕೊಂಡು ಈ ಪಠ್ಯವನ್ನು ರಚಿಸಲಾಗಿದೆ.

ಪದವಿ ವಿದ್ಯಾರ್ಥಿಗಳು ನಿರ್ದಿಷ್ಟ ಥೀಮ್‌ವೊಂದರ ಕುರಿತು ವಿಭಿನ್ನ ದೃಷ್ಟಿಕೋನಗಳಿಂದ ಸ್ವತಂತ್ರವಾಗಿ ಆಲೋಚಿಸುವುದು ಸಾಧ್ಯವಾಗಬೇಕು ಎಂಬುದು ಈ ಪಠ್ಯ ರಚನೆಯ ಹಿಂದಿನ ಆಶಯವಾಗಿದೆ.

ಪಂಪನಿಂದ ಹಿಡಿದು ಅನುಪಮಾ ಅವರವರೆಗೆ ಇಲ್ಲಿ ಸಂಕಲಿತವಾಗಿರುವ ಒಟ್ಟು ೧೫ ವಿವಿಧ ಕಾವ್ಯ, ಕತೆ, ಲೇಖನಗಳನ್ನು ಆರಿಸಲಾಗಿದ್ದು, ಪ್ರತಿಯೊಂದು ಪಠ್ಯದ ಸಂಕ್ಷಿಪ್ತ ಆಶಯವನ್ನು ವಿವರಿಸಲಾಗಿದೆ. ಭೂಮಿ, ಜೀವ ಮತ್ತು ಆಕಾಶ ಎನ್ನುವ ವಿಷಯ ವಸ್ತುಗಳು ಪರಿಕಲ್ಪನೆಯಲ್ಲಿ ಬೇರೆ ಬೇರೆಯಾಗಿದ್ದರೂ ಒಂದಕ್ಕೊಂದು ಅಂತರ್ ಸಂಬಂಧವುಳ್ಳಂತಹವು.

ಸೂರ್ಯನ ಸುತ್ತ ತಿರುಗುವ ಭೂಮಿಗೆ ಸ್ವತಂತ್ರ ಅಸ್ತಿತ್ವ ಇಲ್ಲದಿದ್ದರೂ ಭೂಮಿಯಲ್ಲಿ ವಾಸಿಸುವ ಎಲ್ಲ ಜೀವಿಗಳಿಗೆ ಇದು ಆಧಾರವಾಗಿದೆ. ಜೀವಿಗಳಿಗೆ ಅಗತ್ಯವಾದ ಗಾಳಿ, ನೀರು, ಆಹಾರಗಳಿಗೆ ಭೂಮಿ ಸದ್ಯಕ್ಕೆ ಅನಿವಾರ್ಯವೂ ಆಗಿದೆ. ಮುಖ್ಯವಾಗಿ ಮನುಷ್ಯ ಸಮುದಾಯಕ್ಕೆ ವೈಯಕ್ತಿಕ ಸಂಪತ್ತಿನ ಮಮಕಾರ ಬೆಳೆದಾಗಿನಿಂದ 'ನೆಲ' ಆ ಸಂಪತ್ತಿನ ಕೇಂದ್ರವಾಗಿ ರೂಪುಗೊಂಡಿದೆ. ತತ್ವಜ್ಞಾನಿಗಳು, ದಾರ್ಶನಿಕರು, 'ಮಣ್ಣು ಮಾಯೆ' ಎಂದು ಎಷ್ಟೇ ಹೇಳಿದರೂ ಈ ಮಣ್ಣಿಗಾಗಿ ಸಾವಿರಾರು ವರ್ಷಗಳಿಂದ ಯುದ್ಧಗಳಾಗಿವೆ, ಆಗುತ್ತಲಿವೆ. ಭೂಮಿಯ ಬೆನ್ನುಹತ್ತಿದ ಯಾರೂ ಅದನ್ನು ಪೂರ್ಣವಾಗಿ ಪಡೆಯಲಾಗಿಲ್ಲ. ಮನುಷ್ಯ ಪರಿಸರದ ಮಾರಣ ಹೋಮ ನಡೆದರೂ ನೆಲವ್ಯಾಮೋಹ ಯಾರನ್ನೂ ಬಿಟ್ಟಿಲ್ಲ. ಮೂವತ್ತೆರಡೇ ವರ್ಷದಲ್ಲಿ ಇಡೀ ಭೂಮಿಯನ್ನು ಗೆದ್ದ ಅಲೆಗ್ಸಾಂಡರನಿಗೆ ಒಂದು ಹಂತದಲ್ಲಿ ತನ್ನ ಸೈನಿಕರಿಗೆ ಹನಿ ನೀರು ಕೊಡಲಾಗಲಿಲ್ಲವೆಂದರೆ ಆ ಗೆಲುವಿನ ಸಾರ್ಥಕತೆ ಏನು? ಎಂದು ಯೋಚಿಸಬೇಕಾಗಿದೆ. ಸಾಕ್ಷಾತ್ ಶಿವ-ಪಾರ್ವತಿಯರು ಕೈಲಾಸಕ್ಕೆ ಕರೆದರೆ ಶಿವಭಕ್ತ ಶರಣರಿರುವ ಈ ನೆಲವೇ ನನಗೆ ಕೈಲಾಸ ಸಮಾನ ಎಂಬಷ್ಟು ಧರ್ಮ, ನೀತಿ, ಭಕ್ತಿ, ಮೌಲ್ಯಗಳ ನೆಲೆಯಾದ ಭೂಮಿಯನ್ನು ಪ್ರೀತಿಸುವ ಬಸವಣ್ಣನವರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಬೇಕು. ಭೂಮಿ ಬಸವಣ್ಣನವರಿಗೆ ಅಮೂಲ್ಯ ಜೀವಗಳ ಆವಾಸಸ್ಥಾನ. 'ಜೀವ ಸಮಾನತೆ'ಯೇ ಅವರು ಭೂಮಿಯನ್ನು ಇಷ್ಟಪಡುವುದಕ್ಕೆ ಕಾರಣ. ಅದು ಅವರ ರಾಜಕಾರಣ.

ಆದರೆ ಜೀವನಿಷ್ಠೆಯನ್ನು ನಿರ್ಲಕ್ಷಿಸುತ್ತಾ ಅಸಹನೆಯ ವಿಷಧೂಮವನ್ನುಗುಳುತ್ತಾ ಧಾಂಡಿಗ ರಾಜಕಾರಣ ಮುನ್ನುಗ್ಗುತ್ತಿರುವ ಈ ಸಂದರ್ಭದಲ್ಲಿ ಭೂಮ್ಯಾಕಾಶಗಳ ನಡುವೆ ಅನನ್ಯ ಸಾಧನೆಗಳು ಜರುಗುತ್ತಿರುವುದನ್ನು ಮರೆಯುವಂತಿಲ್ಲ. ದುಷ್ಟ ರಾಜ್ಯಾಡಳಿತವೂ ವೈಜ್ಞಾನಿಕ ಜಿಗಿತಗಳೂ ಸಮಾನಾಂತರವಾಗಿ ಸಾಗುತ್ತಲೇ ಇರುವಾಗ ನಮಗೆ ಬದುಕಿನ ಕರಾಳ ಮುಖಗಳು ಭಯಾತಂಕವನ್ನು ಹುಟ್ಟಿಸುವುದು ಸಹಜವಾಗಿದೆ. ಆದರೆ ವಿಜ್ಞಾನ, ಸಂಗೀತ, ಕ್ರೀಡೆ, ಕಲೆ ಮುಂತಾದ ಕ್ಷೇತ್ರಗಳ, ಮಾತನಾಡದೇ ಮಾಡುವ ಸಾಧನೆಗಳು ಪ್ರಜ್ಞಾವಂತರ ನೆಮ್ಮದಿಗೆ ಕಾರಣಬೇಕಾಗಿದೆ. ಜಾತಿ,ಧರ್ಮ,ಭಾಷೆ , ಬಣ್ಣ, ಹೀಗೆ ನಡೆವ ಹಾದಿಯ ಪತಿ ಕ್ಷಣದಲ್ಲಿ ಮಾತಿನಬ್ಬರದ ಪ್ರಚಾರದ , ತೋರಿಕೆಯ ರಾಜಕೀಯಾಡಂಬರದಲ್ಲಿ ಪ್ರಜ್ಞೆಯು ತಣ್ಣಗೆ ಕ್ರಿಯಾಶೀಲವಾಗಿರುತ್ತದೆಂಬುದನ್ನು ಮನಗಾಣಬೇಕಾಗಿದೆ. ಸಾಮೂಹಿಕ ಜೀವನಾಶಕ್ಕೆಳಸಿ ನೆಲವನ್ನು ಆಳಬಹುದೆಂಬುದು ನಿರರ್ಥಕ.

ರನ್ನನ ದುರ್ಯೋಧನನ ಈ ಮಾತುಗಳನ್ನು ಗಮನಿಸಬೇಕು. ಈ ನೆಲನಿದು ಪಾಳ್ಗೆಲನೆನಗೆ, ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ ಎಂದು ಭೂಮಿಯನ್ನು ತಿರಸ್ಕರಿಸುವ ದುರ್ಯೋಧನ ಮುಂದುವರಿದು ಹೇಳುತ್ತಾನೆ.

ಪುದುವಾಳಲ್ಕಣಮಾಗದೆಂತುಮವರೊಳ್ ಸಂಧಾನಮಂ ಮಾಡಲಾ

ಗದು ನೀಮಿಲ್ಲದೆಯಜ್ಜ ಬಿಲ್ಲಗುರುಗಳ್ ತಾಮಿಲ್ಲದಾ ಕರ್ಣನಿ।

ಲ್ಲದೆ ದುಶ್ಯಾಸನನಿಲ್ಲದಾರೊಡನೆ ರಾಜಂಗೆಯ್ವೆನಾರ್ಗೆನ್ನ ಸಂ

ಪದಮಂ ತೋರುವೆನಾರ್ಗೆ ತೋರಿ ಮೆರೆವೆಂ ನಾನಾವಿನೋದಂಗಳಂ ॥

ಜೀವ ಹಿಂಸೆಯಿಂದಲೇ ಲೋಕವನ್ನಾಳುವ ಭ್ರಮೆಯಿರುವವರು ಹೀಗೆ ಯೋಚಿಸಬೇಕಾದ ಅಗತ್ಯವಿದೆ. ತಾನಿಡುವ ಪ್ರತಿ ಹೆಜ್ಜೆಯ ಕೆಳಗೆ ಈ ನೆಲಗಳಿಕೆಗಾಗಿ ಮಡಿದವರ ಸಮಾಧಿಗಳಿವೆ ಎಂಬ ಚರಿತ್ರೆಯ ಪ್ರಜ್ಞೆ ಕಾಡಬೇಕಾಗಿದೆ.

ಭೂಮಿ, ಜೀವ ಮತ್ತು ಆಕಾಶಗಳೆಲ್ಲವನ್ನು ತಮ್ಮ ಬಂಡವಾಳದ ಆಡುಂಬೊಲವನ್ನಾಗಿಸಿಕೊಂಡಿರುವ ಕಾರ್ಪೋರೇಟ್ ಜಗತ್ತಿಗೆ ಲಾಭಕೇಂದ್ರಿತ ಉದ್ದೇಶ ಮಾತ್ರವಿರಲು ಸಾಧ್ಯ. ಆದರೆ ಜೀವಗಳಿಗಾಗಿ ಭೂಮಿಯನ್ನು ಅದಮ್ಯವಾಗಿ ಪ್ರೀತಿಸುವ ಆಕಾಶದೆತ್ತರದ ಆಲೋಚನೆಗಳನ್ನು ಮಾಡುವ ಸರ್ವ ಹಿತಾಸಕ್ತ ಸ್ನೇಹ ಸಮುದಾಯ ವೊಂದು ಅಮೃತದ ಅಂತರ್‌ವಾಹಿನಿಯಂತೆ ಎದೆಯಿಂದಲೆದೆಗೆ ಹರಿಯುತ್ತಿರುತ್ತದೆ.

ಇಲ್ಲಿನ ಪಠ್ಯಗಳು ಈ ಬಗೆಯ ಜೀವಂತಿಕೆಯನ್ನು ಸ್ವಯಂ ಸ್ಪಷ್ಟಪಡಿಸುವಂತಿವೆ.

ಈ ಕನ್ನಡ ಲೋಕವನ್ನು ರೂಪಿಸಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಪ್ರೊ. ಬಿ.ಬಿ. ಕಲಿವಾಳ ಅವರಿಗೆ, ಸಹಕಾರ ನೀಡಿದ ಕನ್ನಡ ಅಧ್ಯಯನದ ಮಂಡಳಿಯ ಅಧ್ಯಕ್ಷರು, ಸದಸ್ಯರಿಗೆ, ಪಠ್ಯಗಳ ಆಯ್ಕೆಯಲ್ಲಿ, ತಪ್ಪು ತಿದ್ದುವಲ್ಲಿ ಜೊತೆಗಿದ್ದು ಸಹಕರಿಸಿದ ಗೆಳೆಯ ರಾಮಚಂದ್ರ ಜಿ.ಎಸ್. ಅವರಿಗೆ, ಅಕ್ಷರ ಜೋಡಣೆ ಮಾಡಿದ ಥಾಮಸ್ ಅವರಿಗೆ ಹಾಗೂ ಇತರ ಮಿತ್ರರಿಗೆ ಕೃತಜ್ಞತೆಗಳು.

**ದಾದಾಪೀರ್ ನವಿಲೇಹಾಳ್**

01.01.2017
ದಾವಣಗೆರೆ

**ಡಾ. ಆರ್. ಮಹೇಶ್**

# ಪರಿವಿಡಿ

**ಪು.ಸಂ**


| | | | |
|---|---|---|---|
| ೧ | **ಕರ್ಣ ರಸಾಯನಮಲ್ತೆ ಭಾರತಂ** | **ಪಂಪ** | ೧ |
| ೨ | **ಹಗೆಗೆ ಕೊಡುವೆನೆ ಮೇದಿನಿಯನು** | **ಕುಮಾರವ್ಯಾಸ** | ೭ |
| ೩ | **ಒಬ್ಬನಿಗೆ ಎಷ್ಟು ಭೂಮಿ ಬೇಕು?** | **ಲಿಯೊ ಟಾಲ್‌ಸ್ಟಾಯ್**<br>**ಅನುವಾದ : ಜಿ.ಎನ್. ರಂಗನಾಥರಾವ್** | ೧೨ |
| ೪ | **ಭರತಮಾತೆ** | **ಕುವೆಂಪು** | ೩೪ |
| ೫ | **ಶವದ ಮನೆ** | **ಚದುರಂಗ** | ೪೭ |
| ೬ | **ಋಣದ ಹುಂಜ** | **ಸು.ರಂ. ಎಕ್ಕುಂಡಿ** | ೬೪ |
| ೭ | **ನಾಡದೇವಿಯೆ** | **ಕೆ.ಎಸ್. ನಿಸಾರ್ ಅಹಮದ್** | ೬೮ |
| ೮ | **ಆಧುನಿಕ ನಾಗರಿಕತೆ ಮತ್ತು ಗೋವಿನ ಹಾಡು** | **ಯು.ಆರ್. ಅನಂತಮೂರ್ತಿ** | ೭೦ |
| ೯ | **ಓ ಎನ್ನ ದೇಶಬಾಂಧವರೇ** | **ಚಂದ್ರಶೇಖರ ಪಾಟೀಲ** | ೭೯ |
| ೧೦ | **ಬೇರೊಂದು ಲೋಕದಲ್ಲಿ ಇಟ್ಟ ಹೆಜ್ಜೆ** | **ಪೂರ್ಣ ಚಂದ್ರ ತೇಜಸ್ವಿ** | ೮೩ |

| | | | |
|---|---|---|---|
| ೧೧ | ಪರಿಚಯ | ಲ್ಯಾರಿ ಕಾರ್ನ್<br>ಅನುವಾದ : ಸುರೇಂದ್ರ ಕೌಲಗಿ | ೯೪ |
| ೧೨ | ನಲ್ಲಿಯಲ್ಲಿ ನೀರು ಬಂದಿತು | ಕೆ. ಸದಾಶಿವ | ೧೦೩ |
| ೧೩ | ಮರಳಿನ ಬಳಕೆ : ದುಷ್ಪರಿಣಾಮಗಳು ಮತ್ತು ಪರಿಹಾರಗಳು | ಪ್ರೊ. ಎ.ಎಚ್. ರಾಜಾಸಾಬ್ | ೧೧೨ |
| ೧೪ | ಜ್ಞಾನ - ಮೂರನೆಯ ಕಣ್ಣು | ಡಾ. ಎಚ್.ಎಸ್. ಅನುಪಮಾ | ೧೧೯ |
| ೧೫ | ಮರೆಯಾಗುತ್ತಿರುವ ಜನಪದ ಊಟ ಗಿಣ್ಣು | ಬ್ರಹ್ಮದೇವ ಹದಳಗಿ | ೧೨೮ |